# ರೂ 2000 ಅಂಕಿತ ಬ್ಯಾಂಕ್‌ನೋಟುಗಳು – ಚಲಾವಣೆಯಿಂದ ಹಿಂತೆಗೆಯುವಿಕೆ – ಪುನರಾವಲೋಕನೆ

1. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ದಿನಾಂಕ ಮೇ, 19, 2023ರ ತಮ್ಮ ಪ್ರೆಸ್ ರಿಲೀಸ್ 2023-2024/257 ಮೂಲಕ 2000ದ ಬ್ಯಾಂಕ್‌ನೋಟ್‌ಗಳು ಚಲಾವಣೆಯಿಂದ ಹಿಂತೆಗೆಯಲಾಗುತ್ತಿರುವುದನ್ನು ಘೋಷಿಸಿರುತ್ತದೆ. ಈ ಕಾರ್ಯವನ್ನು ನಿರ್ಧಾರಿತ ಕಾಲ ಪರಿಮಿತಿಯೊಳಗೆ ಪೂರ್ತಿಗೊಳಿಸಲು ಮತ್ತು ಸಾರ್ವಜನಿಕರಿಗೆ ಸಾಕಷ್ಟು ಸಮಯವನ್ನು ಒದಗಿಸಲು ಜನಸಾಮಾನ್ಯರು 2000ದ ನೋಟುಗಳನ್ನು ಬ್ಯಾಂಕ್‌ನಲ್ಲಿ ಜಮಾ ನೀಡುವುದು ಮತ್ತು /ಅಥವಾ ಬದಲಾಯಿಸಿಕೊಳ್ಳುವುದನ್ನು ಸಾಧ್ಯಗೊಳಿಸಲು ಸೆಪ್ಟೆಂಬರ್ 30, 2023ರ ವರೆಗೆ ಸಮಯ ನೀಡಲು ಬ್ಯಾಂಕ್‌ಗಳಿಗೆ ಸಲಹೆ ನೀಡಲಾಗಿದೆ. ಈ ಎಕ್ಸ್‌ಚೇಂಜ್ ಸೌಲಭ್ಯವು ಆರ್‌ಬಿಐ ಇಶ್ಯೂ ಡಿಪಾರ್ಟ್‌ಮೆಂಟ್‌ಗಳಿರುವ (ಆರ್‌ಬಿಐ ಇಶ್ಯೂ ಆಫೀಸುಗಳು)[1] ಆರ್‌ಬಿಐಯ 10 ರೀಜನಲ್ ಆಫೀಸುಗಳಲ್ಲಿ (ಆರ್‌ಒಗಳಲ್ಲಿ) ಲಭ್ಯವಿದೆ. ಪ್ರತಿ ತಿಂಗಳೂ ಜಾರಿಪಡಿಸಲಾಗುತ್ತಿರುವ ಪ್ರೆಸ್ ರಿಲೀಸ್‌ಗಳ ಮೂಲಕ ಈ ಹಿಂತೆಗೆಯುವಿಕೆಯ ಕ್ರಮದ ವಸ್ತುಸ್ಥಿತಿಯನ್ನು ಆರ್‌ಬಿಐ ಜನಸಾಮಾನ್ಯರಿಗೆ ತಿಳಿಸುತ್ತಲೇ ಇದೆ.

2. ಬ್ಯಾಂಕ್‌ಗಳಿಂದ ದೊರಕಿರುವ ಡೇಟಾ ಅನುಸಾರ ಮೇ 19, 2023ರಂದಿನಂತೆ ₹3.56 ಲಕ್ಷ ಕೋಟಿ ಮೌಲ್ಯದ 2000ದ ಬ್ಯಾಂಕ್ ನೋಟ್‌ಗಳು ಚಲಾವಣೆಯಲ್ಲಿದ್ದು ₹3.42 ಲಕ್ಷ ಕೋಟಿ ಮೌಲ್ಯದ ನೋಟ್‌ಗಳು ಮರಳಿಬಂದಿರುತ್ತವೆ ಮತ್ತು ಸೆಪ್ಟೆಂಬರ್ 29, 2023ರ ವ್ಯವಹಾರ ಸಮಯದ ಮುಕ್ತಾಯದ ವರೆಗೆ ಕೇವಲ ₹0.14 ಲಕ್ಷ ಕೋಟಿ ಮೌಲ್ಯದ ನೋಟ್‌ಗಳು ಹಿಂದೆ ಉಳಿದಿವೆ. ಈ ರೀತಿಯಲ್ಲಿ ಮೇ 19, 2023ರಂದಿನಂತೆ 96% ₹2000ದ ಬ್ಯಾಂಕ್‌ನೋಟ್‌ಗಳನ್ನು ಹಿಂದೆ ಪಡೆದಂತಾಗಿದೆ.

3. ಹಿಂತೆಗೆಯುವ ಪ್ರಕ್ರಿಯೆಗಾಗಿ ನಿಗದಿತಪಡಿಸಲಾದ ಅವಧಿಯು ಮುಗಿದಿರುವುದರಿಂದ, ಮತ್ತು ಪುನರಾವಲೋಕನೆಯೊಂದರ ಆಧಾರದಲ್ಲಿ, ₹2000ದ ನೋಟ್‌ಗಳ ಡಿಪಾಜಿಟ್/ಬದಲಾಯಿಸುವಿಕೆಯ ಸದ್ಯದ ವ್ಯವಸ್ಥೆಯನ್ನು ಅಕ್ಟೋಬರ್ 07, 2023ರ ವರೆಗೆ ಮುಂದುವರಿಸಲು ನಿರ್ಧರಿಸಲಾಯಿತು. ಅಕ್ಟೋಬರ್ 08, 2023ರಿಂದ ಆರಂಭಿಸಿ ₹2000ದ ಬ್ಯಾಂಕ್‌ನೋಟ್‌ಗಳ ಡಿಪಾಜಿಟ್/ಬದಲಾಯಿಸುವಿಕೆಯ ಕ್ರಮವು ಈ ರೀತಿ ಇರುತ್ತದೆ:

a) ಬ್ಯಾಂಕ್‌ನ ಬ್ರಾಂಚ್‌ಗಳಲ್ಲಿ ಬ್ಯಾಂಕ್‌ನೋಟ್‌ಗಳ ಡಿಪಾಜಿಟ್/ಬದಲಾಯಿಸುವಿಕೆಯನ್ನು ನಿಲ್ಲಿಸಲಾಗುತ್ತದೆ.

b) ₹2000ದ ನೋಟ್‌ಗಳನ್ನು ಒಂದುಬಾರಿಗೆ ₹20,000/-ದ ಮಿತಿಯಲ್ಲಿ ವ್ಯಕ್ತಿಗಳು/ಸಂಸ್ಥೆಗಳು 19 ಆರ್‌ಬಿಐ ಇಶ್ಯೂ ಆಫೀಸುಗಳಲ್ಲಿ ಬದಲಾಯಿಸುವುದನ್ನು ಮುಂದುವರಿಸಲಾಗುತ್ತದೆ.

c) ವ್ಯಕ್ತಿಗಳು/ಸಂಸ್ಥೆಗಳು ಭಾರತದಲ್ಲಿ ತಮ್ಮ ಬ್ಯಾಂಕ್ ಅಕೌಂಟ್‌ನಲ್ಲಿ ಯಾವುದೇ ಖಾತೆಗಾಗಿ 19 ಆರ್‌ಬಿಐ ಇಶ್ಯೂ ಆಫೀಸುಗಳಲ್ಲಿ ₹2000ದ ಬ್ಯಾಂಕ್‌ನೋಟ್‌ಗಳನ್ನು ಸಲ್ಲಿಸಬಹುದು.

d) ದೇಶದಿಂದ ವ್ಯಕ್ತಿಗಳು/ಸಂಸ್ಥೆಗಳು ₹2000ದ ಬ್ಯಾಂಕ್ ನೋಟ್‌ಗಳನ್ನು ಭಾರತದಾದ್ಯಂತ ತಮ್ಮ ಬ್ಯಾಂಕ್ ಅಕೌಂಟ್‌ನಲ್ಲಿ ಜಮಾ ನೀಡಲಿಕ್ಕಾಗಿ 19 ಆರ್‌ಬಿಐ ಇಶ್ಯೂ ಆಫೀಸುಗಳಿಗೆ ಇಂಡಿಯಾ ಪೋಸ್ಟ್ ಮೂಲಕ ರವಾನಿಸಬಹುದು.

e) ಸದರಿ ಬದಲಾಯಿಸುವಿಕೆ ಅಥವಾ ಜಮಾ ನೀಡಿಕೆ ಸಂಬಂಧಪಟ್ಟ ಆರ್‌ಬಿಐ/ಸರಕಾರಿ ನಿಯಂತ್ರಣಗಳು, ಅರ್ಹ ಪರಿಚಯದ ಮತ್ತು ಆರ್‌ಬಿಐ ಅಗತ್ಯವೆಂದು ಬಯಸಬಹುದಾದ ದಸ್ತಾವೇಜುಗಳ ನೀಡಿಕೆಗೆ ಬದ್ಧವಾಗಿದೆ.

f) ನ್ಯಾಯಾಲಯಗಳು, ಕಾನೂನು ರಕ್ಷಕ ಏಜನ್ಸಿಗಳು, ಸರಕಾರಿ ವಿಭಾಗಗಳು ಅಥವಾ ತಪಾಸಣೆಯ ಪ್ರಕ್ರಿಯೆಯಲ್ಲಿ ತೊಡಗಿರುವ ಇತರ ಸಾರ್ವಜನಿಕ ಪ್ರಾಧಿಕಾರಗಳು, ಬೇಕಾದಾಗಲೆಲ್ಲಾ, ಯಾವುದೇ ಮಿತಿ ಇಲ್ಲದೆ 2000ದ ನೋಟ್‌ಗಳನ್ನು 19 ಆರ್‌ಬಿಐ ಇಶ್ಯೂ ಆಫೀಸುಗಳಲ್ಲಿ ಡಿಪಾಜಿಟ್ ಮಾಡಬಹುದು/ಬದಲಾಯಿಸಬಹುದು.

4. ₹2000ದ ಬ್ಯಾಂಕ್‌ನೋಟ್‌ಗಳು ಮುಂದುವರಿದು ಕೂಡ ಕಾನೂನಿನ ಅನುಸಾರ ಮಾನ್ಯವಾಗಿರುತ್ತವೆ.

5. ಮೇಲ್ಕಾಣಿಸಿದಂತೆ 19 ಆರ್‌ಬಿಐ ಇಶ್ಯೂ ಆಫೀಸುಗಳಲ್ಲಿ ₹2000ದ ಬ್ಯಾಂಕ್‌ನೋಟ್‌ಗಳ ಜಮಾ ನೀಡಿಕೆ/ಬದಲಾಯಿಸುವಿಕೆಯ ಸೌಲಭ್ಯ ಮುಂದೆ ಸೂಚಿತಗೊಳಿಸುವ ವರೆಗೆ ಲಭ್ಯವಿರುತ್ತದೆ.

6. ಇನ್ನು ವಿಳಂಬ ಮಾಡದೆ ತಮ್ಮಲ್ಲಿ ಇರಬಹುದಾದ ₹2000ದ ಬ್ಯಾಂಕ್‌ನೋಟ್‌ಗಳನ್ನು ಜಮಾ ನೀಡಬೇಕು/ ಬದಲಾಯಿಕೊಳ್ಳಬೇಕು ಎಂದು ಸಾರ್ಲಜನಿಕರಿಗೆ ಸಲಹೆ ನೀಡಲಾಗುತ್ತಿದೆ.

7. ಆಗಾಗ ಕೇಳಿಬರುವ ಪ್ರಶ್ನೆಗಳ (ಎಫ್‌ಎಕ್ಯೂಗಳ) ಮೇಲಿನ ಅದ್ಯತನಗೊಂಡ ದಾಖಲೆಯನ್ನು ಸಾರ್ವಜನಿಕರ ಅನುಕೂಲತೆಗಾಗಿ ಆರ್‌ಬಿಐ ವೆಬ್‌ಸೈಟಿನಲ್ಲಿ ಇರಿಸಲಾಗಿದೆ.



HDFC BANK
INDIA'S No.1 BANK